ಪ್ರಧಾನ **ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ**

**ದಂಡಾಧಿಕಾರಿಗಳ ನ್ಯಾಯಾಲಯ,** ಮಾಗಡಿ.

**ಸಿ.ಸಿ.ನಂ.599/2016**

ಕರ್ನಾಟಕ ಸರಕಾರ ಪರಃ ಮಾಗಡಿ ಪಿ ಎಸ್ಃ

- ವಿರುದ್ಧ -

**ಆರೋಪಿತರುಃ**

1. ಶಿವರುದ್ರಯ್ಯ ಬಿನ್ ಮಲ್ಲಯ್ಯ, 47 ವರ್ಷ,
ವಾಸಃ ಬಸವನಗುಡಿಪಾಳ್ಯ, ಕಸಬಾ ಹೋಬಳಿ,
ಮಾಗಡಿ ತಾಲೂಕು, ರಾಮನಗರ, ಕರ್ನಾಟಕ.

2. ಕೃಷ್ಣ ಟಿ. ಬಿನ್ ಮಹದೇವಯ್ಯ, 39 ವರ್ಷ,
ವಾಸಃ ನಂ.77, ಅಂಜನಾಪುರ, ಗೊಲ್ಲರಹಳ್ಳಿ,
ಉತ್ತರಹಳ್ಳಿ, ಬೆಂಗಳೂರು-62.

3. ರುದ್ರೇಶ @ ರವಿ ಬಿನ್ ಮಹದೇವಯ್ಯ, 25 ವರ್ಷ,
ವಾಸಃ ಬಸವನಗುಡಿಪಾಳ್ಯ, ಕಸಬಾ ಹೋಬಳಿ,
ಮಾಗಡಿ ತಾಲೂಕು, ರಾಮನಗರ, ಕರ್ನಾಟಕ.

4. ರವಿಕುಮಾರ್ ಬಿ. ಜಿ. @ ಟೆಂಗ
ಬಿನ್ ಗಂಗಯ್ಯ, 28 ವರ್ಷ,
ವಾಸಃ ಬಸವನಗುಡಿಪಾಳ್ಯ, ಕಸಬಾ ಹೋಬಳಿ,
ಮಾಗಡಿ ತಾಲೂಕು, ರಾಮನಗರ, ಕರ್ನಾಟಕ.

5. ಮಂಜುನಾಥ ಬಿನ್ ಮಲ್ಲಯ್ಯ, 31 ವರ್ಷ,
ವಾಸಃವಡೇರಮಂಚನಹಳ್ಳಿ ಗ್ರಾಮ,
ಜಿಗಣಿ ಹೋಬಳಿ, ಆನೇಕಲ್ ತಾಲೂಕು,
ಬೆಂಗಳೂರು ಜಿಲ್ಲೆ, ಕರ್ನಾಟಕ.

6. ಲೋಕೇಶ ಬಿನ್ ತಿಮ್ಮಯ್ಯ, 27 ವರ್ಷ,
ವಾಸಃ ನಂ.10, ಶ್ರೀಗಂಧ ಕಾವಲ್,
ಮಾಗಡಿ ಮುಖ್ಯ ರಸ್ತೆ, ಬೆಂಗಳೂರು-91.

**ದೋ ಷಾ ರೋ ಪ ಣೆ**

ಶ್ರೀ ಶ್ರೀನಿವಾಸ ಕೆ. ಆರ್, ಬಿ.ಎ.ಎಲ್, ಎಲ್. ಎಲ್. ಎಮ್ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಮಾಗಡಿ, ಆದ ನಾನು ನಿಮ್ಮ ಮೇಲೆ ಆರೋಪಿಸುವುದೇನೆಂದರೆಃ-

ದಿನಾಂಕ **30.07.2014** ರಂದು ರಾತ್ರಿ **11-30** ಗಂಟೆ ಸುಮಾರಿಗೆ ಮಾಗಡಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ಹಲಸಬೆಲೆ ಗ್ರಾಮದ, ಕಸಬಾ ಹೋಬಳಿ, ಮಾಗಡಿ ತಾಲೂಕಿನಲ್ಲಿರುವ ಬಸವಣ್ಣ ದೇವರ ದೇವಸ್ಥಾನದ ಗರ್ಭಗುಡಿದಲ್ಲಿದ್ದ ಬಸವಣ್ಣ ದೇವರ ವಿಗ್ರಹದಲ್ಲಿ ನಿಧಿ ಇದೆ ಎಂದು, ಸದರಿ ದೇವಸ್ಥಾನದ ಬಳಿ **1** ರಿಂದ **6** ನೇ ಆರೋಪಿತರು ಕೂಡಿಕೊಂಡು ಅಕ್ರಮ ಕೂಟ ಕಟ್ಟಿಕೊಂಡಿರುತ್ತಿರಿ, ಆ ಮೂಲಕ ಭಾ ದಂ ಸಂ ಕಲಂ **143** ಸಹ ಕಲಂ **149** ರಡಿಯಲ್ಲಿ ಅಪರಾಧವನ್ನು ಮಾಡಿರುತ್ತಿರಿ ಎಂದು ಆರೋಪ ಹೊರಿಸಲಾಗಿದೆ.

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಬಸವಣ್ಣ ದೇವರ ದೇವಸ್ಥಾನದ ಗರ್ಭಗುಡಿದಲ್ಲಿದ್ದ ಬಸವಣ್ಣ ದೇವರ ವಿಗ್ರಹವನ್ನು ಶಿವರುದ್ರಯ್ಯನವರ ಜಮೀನಿಗೆ ತೆಗೆದುಕೊಂಡು ಹೋಗಿ, ನಿಮ್ಮಗಳ ಪೈಕಿ **2** ನೇ ಆರೋಪಿತನಾದ ನೀವು ಸದರಿ ವಿಗ್ರಹವನ್ನು ಪೂಜೆ ಮಾಡಿ ಸುತ್ತಿಗೆಯಿಂದ ಹೊಡೆದು ಬಗ್ನಗೊಳಿಸಿ ದಾರ್ಮಿಕ ಭಾವನೆಗೆ ದಕ್ಕೆಯುಂಟು ಮಾಡಿರುತ್ತಿರಿ, ಆ ಮೂಲಕ ಭಾ ದಂ ಸಂ ಕಲಂ **295** ಸಹ ಕಲಂ **149** ರಡಿಯಲ್ಲಿ ಅಪರಾಧವನ್ನು ಮಾಡಿರುತ್ತಿರಿ ಎಂದು ಆರೋಪ ಹೊರಿಸಲಾಗಿದೆ.

ಸದರಿ ಆರೋಪ ಈ ನ್ಯಾಯಾಲಯದ ವ್ಯಾಪ್ತಿಯಲ್ಲಿದ್ದು ಸದರಿ ಆರೋಪಿತರಾದ ನಿಮ್ಮನ್ನು ವಿಚಾರಣೆಗೆ ಒಳಪಡಿಸಲಾಗುವುದು.

**ದಿನಾಂಕ:-12.01.2024**

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ನ್ಯಾಯಾಲಯ, ಮಾಗಡಿ.